# ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ
# ಕೊಪ್ಪಳ

ಬಿ.ಸಿ. ಪಾಟೀಲ್ ಬಡಾವಣೆ, ಹೊಸಪೇಟೆ ರಸ್ತೆ,
ಕೊಪ್ಪಳ – 583 231.

## 2019–2020 ನೇ ಸಾಲಿನ

# ವಾರ್ಷಿಕ ವರದಿ

*********

# ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, ಕೊಪ್ಪಳ.
# 2019–20 ನೇ ಸಾಲಿನ ವಾರ್ಷಿಕ ವರದಿ

ದಿನಾಂಕ:01–04–2019 ರಿಂದ 31–03–2020 ರವರೆಗಿನ ಆಡಳಿತ ವರದಿ

1) ಪೀಠಿಕೆ : –

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರವು ನಗರಾಭಿವೃದ್ಧಿ ಇಲಾಖೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 365 ಎಂಬಿಬಿ 87 ದಿನಾಂಕ:24–4–1998 ರ ಆದೇಶದಂತೆ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:24–4–1998 ರಂದು ಕಾರ್ಯಾರಂಭ ಮಾಡಿತು. ಕೊಪ್ಪಳ ನಗರಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4ಎ ಪ್ರಕಾರ ಕೊಪ್ಪಳ ಪಟ್ಟಣಕ್ಕೆ ಸರ್ಕಾರವು ಸ್ಥಳೀಯ ಯೋಜನಾ ಪ್ರದೇಶ (1) ಕೊಪ್ಪಳ (2) ಭಾಗ್ಯನಗರ (3) ಓಜನಹಳ್ಳಿ (4) ಯತ್ನಟ್ಟಿ (5) ಕಿಡದಾಳ (6) ಬಸಾಪೂರ (7) ಹೂವಿನಾಳ (8) ಬಹದ್ದೂರ ಬಂಡಿ (9) ಚುಕ್ಕನಕಲ್ಲು (10) ಹೊರತಟ್ನಾಳ (11) ಮಂಗಳಾಪುರ (12) ದದೇಗಲ್ ಹಾಗೂ (13) ಕೋಳೂರು ಈ ಗ್ರಾಮಗಳನ್ನು ಸೇರಿಸಿಕೊಳ್ಳಲಾಗಿದೆ. ಇವುಗಳ ಒಟ್ಟು ಕ್ಷೇತ್ರ 11,297 ಹೆಕ್ಟೇರ್ ಆಗಿರುತ್ತದೆ. ಈ ಸಂಬಂಧ ಸರ್ಕಾರದಿಂದ ಅಧಿಸೂಚನೆ ಸಂಖ್ಯೆ:ನಅಇ 188 ಎಂಐಬಿ 99 ದಿನಾಂಕ:5–5–2000 ರಂದು ಹೊರಡಿಸಲಾಗಿದೆ. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಾರ್ವಜನಿಕರಿಗೆ ಉತ್ತಮ ರೀತಿಯ ವಾಸೋಪಯೋಗಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡುವುದು ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಮಹಾ ಯೋಜನೆಯನ್ನು ಸ್ಥಳೀಯ ಯೋಜನಾ ಪ್ರದೇಶವನ್ನು ತಯಾರಿಸಿಕೊಂಡ್ಡಿದ್ದು ಅನುಮೋದನೆಗಾಗಿ ಸರಕಾರಕ್ಕೆ ಕರಡು ಮಹಾ ಯೋಜನೆಯನ್ನು ಸಲ್ಲಿಸಲಾಗಿರುತ್ತದೆ.

2) ಆಡಳಿತಾತ್ಮಕ ರಚನೆ :–

ಕರ್ನಾಟಕ ರಾಜ್ಯ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 365 ಎಂಬಿಬಿ 87 ದಿನಾಂಕ:24–4–1998 ರ ಆದೇಶದಂತೆ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:24–4–1998 ರಂದು ಕಾರ್ಯಾರಂಭ ಮಾಡಿತು. ಕೊಪ್ಪಳ

ನಗರಕ್ಕೆ ಸರ್ಕಾರದ ಆದೇಶ ಸಂಖ್ಯೆ:ನಅಇ 55 ಗುಅಪ್ರಾ 2003 ದಿನಾಂಕ:02-08-2003 ರ ಮೇರೆಗೆ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಮಹಾ ಯೋಜನೆಯನ್ನು ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ ಸಧ್ಯ ಮಹಾಯೋಜನೆ ಪರಿಷ್ಕೃತ-01 ತಾತ್ಕಾಲಿಕ ಅನುಮೋದನೆಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 55 ಗುಅಪ್ರಾ 2003 ದಿನಾಂಕ:02-08-2003 ರ ಮೇರೆಗೆ ನೀಡಲಾಗಿದ್ದು ಅದರಂತೆ, ಸದರಿ ಮಹಾಯೋಜನೆ ಪರಿಷ್ಕೃತ-01 ರ ಕುರಿತು ಸಾರ್ವಜನಿಕ ರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು ಆ ಸಲಹೆ ಮತ್ತು ಆಕ್ಷೇಪಣೆಯ ಕುರಿತು ವಿವರವಾದ ವರದಿಯನ್ನು ತಯಾರಿಸಲಾಗಿದ್ದು ಸಧ್ಯದಲ್ಲಿಯೇ ಮಹಾಯೋಜನೆ ಪರಿಷ್ಕೃತ -01 ರ ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ದಿನಾಂಕ:01-04-2019 ರಿಂದ 31-03-2020 ರವರೆಗಿನ ಆಡಳಿತಾತ್ಮಕ ವೆಚ್ಚವು ರೂ: 88,17,097=00 ಗಳಾಗಿರುತ್ತದೆ.

3) <u>ಈ ವರೆಗಿನ ಪ್ರಗತಿ</u> :-

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೊಪ್ಪಳ ತಾಲೂಕು ಕೊಪ್ಪಳ ಗ್ರಾಮದ ಸರ್ವೇ ನಂಬರ್:153/1/2 ಮತ್ತು 153/2/1 ರ ವಿಸ್ತೀರ್ಣ 09 ಎಕರೆ 00 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 30 ಗುಅಪ್ರಾ 2019 ದಿನಾಂಕ:24-09-2019 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ ಸದರಿ ವಸತಿ ಬಡಾವಣೆಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಅಂದಾಜು ಪತ್ರಿಕೆಗಳನ್ನು ತಯಾರಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇ-ಪ್ರಕ್ಯೂರಮೆಂಟ್ ಪೋರ್ಟಾಲ್ ಮೂಲಕ ಟೆಂಡರ್ ಪ್ರಕಟಣೆ ಯನ್ನು ನೀಡಿದ್ದು ಟೆಕ್ನಿಕಲ್ ಬಿಡ್ ತೆರೆದು ಅದರಲ್ಲಿ ಅರ್ಹರಾದ ಗುತ್ತಿಗೆದಾರರ ಮಾಹಿತಿಯನ್ನು ದಿನಾಂಕ:12-10-2020 ರಂದು ಜರುಗಿದ ಜಿಲ್ಲಾ ಮಟ್ಟದ ಟೆಂಡರ್ ಪರಿಶೀಲನಾ ಸಭೆಯಲ್ಲಿ ಚರ್ಚಿಸಿ ಸರ್ಕಾರದಿಂದ ಟೆಕ್ನಿಕಲ್ ಬಿಡ್ ಅನುಮೋದನೆಗಾಗಿ ಸರ್ಕಾರಕ್ಕೆ ದಿನಾಂಕ:02-11-2020 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಮತ್ತು ರೈತರೊಂದಿಗೆ ರೈತರ ಸಹಭಾಗಿತ್ವದಲ್ಲಿ 50:50 ಅನುಪಾತದಲ್ಲಿ ವಿನ್ಯಾಸವನ್ನು ರಚಿಸಲು ಸಾರ್ವಜನಿಕರಿಗೆ ಆಹ್ವಾನ ನೀಡಿದ ಮೇರೆಗೆ ಸುಮಾರು 100 ಎಕರೆ ಜಮೀನನ್ನು ರೈತರು ಪ್ರಾಧಿಕಾರಕ್ಕೆ ನೀಡಲು ಮಾತುಕತೆ ಪ್ರಗತಿಯಲ್ಲಿರುತ್ತದೆ.

4) <u>ಸಂಪನ್ಮೂಲಗಳ ಕ್ರೂಢೀಕರಣ</u> :-

1) ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ). ಕೊಪ್ಪಳ ನಗರಾಭಿವೃದ್ಧಿ

ಪ್ರಾಧಿಕಾರದಿಂದ 34 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದು ಎಪ್ರಿಲ್ 2018 ರಿಂದ ಹಂಚಿಕೆಯಾಗಿದ್ದು 10 ವಾಣಿಜ್ಯಮಳಿಗೆಗಳಿಂದ ರೂ:3,37,000=00 ಮೊತ್ತ ಜಮಾ ಆಗಿರುತ್ತದೆ. ಬೇಡಿಕೆಗೆ ತಕ್ಕಂತೆ ವಸೂಲಿಯಾಗಿದ್ದು ಬಾಕಿ ಇರುವುದಿಲ್ಲ.

2) ಮುನಸಿಪಾಲಿಟಿ ನಿಧಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಯಾವುದೇ ತರಹದ ಮುನಸಿಪಾಲಿಟಿಯಿಂದ ನಿಧಿ ಜಮಾ ಆಗಿರುವುದಿಲ್ಲ.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ 2018-19ನೇ ಸಾಲಿನ ಆಯವ್ಯಯವನ್ನು ಸರ್ಕಾರದಿಂದ ಅನುಮೋದನೆಯನ್ನು ಪಡೆಯಲು ಈ ಕಾರ್ಯಾಲಯದಿಂದ ಪತ್ರ ಸಂಖ್ಯೆ: ಕೊನಪ್ರಾ/ಆಡಳಿತ/ಆಯವ್ಯಯ/2017-18 ದಿನಾಂಕ:22-02-2018 ರ ಮೇರೆಗೆ ಅನುಮೋದನೆ ಗಾಗಿ ಸಲ್ಲಿಸಲಾಗಿರುತ್ತದೆ. ಇಲ್ಲಿಯವರೆಗೂ 7-8 ಪತ್ರಗಳನ್ನು ಬರೆಯಲಾಗಿದ್ದು ಸರ್ಕಾರದಿಂದ ಅನುಮೋದನೆಯಾಗಿರುವುದಿಲ್ಲ.

2020-21 ರ ಆಯವ್ಯಯದ ಕುರಿತು ಸಭೆಯನ್ನು ದಿನಾಂಕ:11-02-2020 ರಂದು ಜರುಗಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಆದರೆ ಇಲ್ಲಿಯವರೆಗೂ ಅನುಮೋದನೆ ದೊರಕಿರುವುದಿಲ್ಲ.

2020-21 ರ ವೆಚ್ಚ :-

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ 2020-21 ನೇ ಸಾಲಿನ ಆಯವ್ಯಯದ ಪ್ರಕಾರ ದಿನಾಂಕ:01-04-2019 ರಿಂದ 31-03-2020 ರವರೆಗೆ ಒಟ್ಟು ರೂ: 88,17,097=00 ಖರ್ಚಾಗಿರುತ್ತದೆ.

6) ಭೌತಿಕ ಪ್ರಗತಿ :-

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಾಧಿಕಾರದ ಪಕ್ಕದಲ್ಲಿರುವ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಹಾಗೂ ಪ್ರಾಧಿಕಾರದ ಸ್ವಾಧೀನದಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳು ಹಾಗೂ ಉದ್ಯಾನವನ ಪ್ರದೇಶಗಳಿಗೆ ಹಂತ ಹಂತವಾಗಿ ಫೆನ್ಸಿಂಗ್ ಅಳವಡಿಸಲಾಗುತ್ತಿದೆ.

7) ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ :- ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಶೇ.24.10), ಬಡ ಜನರ ಕಲ್ಯಾಣ ನಿಧಿ (ಶೇ 7.25) ಹಾಗೂ ದಿವ್ಯಾಂಗರ ಕಲ್ಯಾಣ ನಿಧಿ

(ಶೇ 5) ಯೋಜನೆಗಳ ಪ್ರಗತಿ ಮತ್ತು ವಿವರ.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಕಲ್ಯಾಣ ಕಾರ್ಯಕ್ರಮಗಳು ಇರುವುದಿಲ್ಲ.

8) ವಿಶೇಷ ಸಾಧನೆ/ಪ್ರಶಸ್ತಿ :-

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ವಿಶೇಷ ಸಾಧನೆ ಇರುವುದಿಲ್ಲ.

9) 2020-21 ನೇ ವರ್ಷದ ಗುರಿ :- ಮುಂಧಿನ ಸಾಲಿನ ಅಗತ್ಯತೆ/ ನಿರೀಕ್ಷೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆಯನ್ನು ಅನುಮೋದನೆಯನ್ನು ಸರ್ಕಾರದಿಂದ ಪಡೆದುಕೊಂಡು ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡುವುದು. ಮತ್ತು ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಕೊಪ್ಪಳ ಪಟ್ಟಣದ ಮಹಾಯೋಜನೆ ಪರಿಷ್ಕೃತ-01 ರ ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಸ್ವಾಧೀನದಲ್ಲಿರುವ ಒಟ್ಟು 42 ನಾಗರೀಕ ಸೌಲಭ್ಯ ನಿವೇಶನಗಳನ್ನು ವಿವಿಧ ಸಂಘ/ಸಂಸ್ಥೆಯವರಿಗೆ ಸರ್ಕಾರಿ ಇಲಾಖೆಗಳಿಗೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದ್ದು ದಿನಾಂಕ:30-01-2021 ರಂದು ಅಂತಿಮ ದಿನಾಂಕ ಮುಕ್ತಾಯವಾಗಿರುತ್ತದೆ. ನಿಯಮಾನುಸಾರವಾಗಿ ನಾಗರೀಕ ಸೌಲಭ್ಯ ನಿವೇಶನಗಳನ್ನು ವಿತರಣೆ ಮಾಡುವ ಕ್ರಮ ಜರುಗಿಸಲಾಗುವುದು.

ಕೊಪ್ಪಳ ನಗರದಲ್ಲಿ ಎಲ್ಲಾ ರಸ್ತೆಗಳಿಗೆ ಗಿಡಗಳನ್ನು ಹಾಕುವ ಯೋಜನೆಯನ್ನು ಕೈಗೊಳ್ಳಲಾಗಿರುತ್ತದೆ. ಮತ್ತು ಈ ನಗರದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಎರಡು ಉದ್ಯಾನವನವನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಕೈಗೊಳ್ಳಲಾಗಿರುತ್ತದೆ.

ಸಹಿ/-
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಕೊಪ್ಪಳ.